**<u>ದಿನಾಂಕಃ 20.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ- ಪ್ರತಿವಾದಿಗಳ ಪರ ಶ್ರೀ.ಕೆ.ಪಿ.ಎಂ. ವಕೀಲರಿಂದ : -</u>**

1) ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿನ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತಯಾರಿಸಲು ಯಾರು ಮಾಹಿತಿಯನ್ನು ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ವ್ಯವಸಾಯ ಮಾಡುತ್ತೇನೆ. ನನಗೆ ಒಂದೂವರೆ ಎಕರೆ ಜಮೀನು ಇರುತ್ತದೆ. ಸರ್ವೇ ನಂ. 99 ಮತ್ತು 98 ರ ಜಮೀನಿಗೆ ಈ ಪ್ರಕರಣವನ್ನು ಹೂಡಿರುತ್ತಾರೆ. ನನ್ನ ಜಮೀನಿನಿಂದ 500 ಮೀಟರ್ ಅಂತರದಲ್ಲಿ ದಾವಾ ಸ್ವತ್ತು ಇರುತ್ತದೆ. ದಾವಾ ಸ್ವತ್ತು ಮೂಲತಃ ಲಕ್ಷ್ಮಿದೇವಮ್ಮನಿಗೆ ಸೇರಿತ್ತು.

2) ಲಕ್ಷ್ಮಿದೇವಮ್ಮನ ತಾಯಿಯ ಹೆಸರು ದೇವೀರಮ್ಮ. ಮರ ಕಡಿದ ವಿಚಾರಕ್ಕೆ ಜಗಳ ಆಗುತ್ತಿದ್ದ ಕಾರಣ ಈ ದಾವೆ ಹೂಡಿರುತ್ತಾರೆ. ಯಾರು ಯಾರ ಮೇಲೆ ಈ ದಾವೆಯನ್ನು ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಲಕ್ಷ್ಮಿದೇವಮ್ಮನ ಮಗ ಕುಮಾರ್ ರವರು ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯುವಂತೆ ನನಗೆ ಹೇಳಿದ್ದರು. ದಾವಾ ಸ್ವತ್ತುಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

3) ಮೊದಲು ದಾವ ಸ್ವತ್ತಿನಲ್ಲಿ ರಾಗಿ ಬೆಳೆಯುತ್ತಿದ್ದರು. ಅದನ್ನು ಹೊರತು ಪಡಿಸಿ ಅಲ್ಲಿ ಬೇರೆ ಏನು ಬೆಳೆಯುವುದಿಲ್ಲ. ಕುಮಾರ್ ರವರು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತಯಾರಿಸಿ ನನಗೆ ಇದೇ ರೀತಿ ಸಾಕ್ಷಿ ಹೇಳಬೇಕು ಎಂದು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ದಾವ ಸ್ವತ್ತುಗಳ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಪಶ್ಚಿಮ ದಿಕ್ಕಿಗೆ ನನಗೆ ಸೇರಿದ ಸ್ವತ್ತು ಇರುತ್ತದೆ. ದಾವಾ ಸ್ವತ್ತುಗಳಲ್ಲಿ ಏನು ವ್ಯವಹಾರ ನಡೆಯುತ್ತಿದೆ ಎಂದು ನನಗೆ ತಿಳಿಯದೆ ಇದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**